ಬಂದಿದ್ದೇನೆ ಎನ್ನುವ ಭರವಸೆಯನ್ನು ಕಣ್ಣಿನಲ್ಲೇ ಜ್ಯೋತ್ಸ್ನಾಗೆ ವರ್ಗಾಯಿಸುತ್ತಿದ್ದ.

ಬಿಳಿಯನೊಬ್ಬ ಅಳಿಯನಾಗಿ ಮನೆಯಲ್ಲಿ ಉಳಿಯಲು ಬಂದರೆ ಅವರ ಕೈಯ್ಯಲ್ಲಿ ಏನೇನು ವ್ಯವಸ್ಥೆ ಮಾಡಲು ಸಾಧ್ಯವೋ ಆ ವ್ಯವಸ್ಥೆಗಳನ್ನು ಅಪ್ಪಅಮ್ಮ ಶಕ್ತಿ ಮೀರಿ ಮಾಡಿದ್ದು ಜ್ಯೋತ್ಸ್ನಾಳ ಕಣ್ಣಿಗೆ ರಾಚುತ್ತಿತ್ತು. ಪ್ಲಾಸ್ಟಿಕ್ಕನ್ನ ಬಿಚ್ಚಿಸಿಕೊಳ್ಳದ ಕರ್ಲಾನ್ ಬೆಡ್ಡು, ಪೇಟೆಮೇಲಿನ ನೆಂಟರು ಬಂದಾಗ ಮಾತ್ರ ಹೊರಬೀಳುವ ಡಾಂಬರುಗುಳಿಗೆ ಪರಿಮಳದ ಟರ್ಕಿಸ್ ಟುವಾಲು, ಏಳಡಿಗೆ ಎತ್ತರವೇರಿಸಿಕೊಂಡ ಬಚ್ಚಲಿನ ಗೋಡೆ ಇವೆಲ್ಲ ಅವಳ ಅನುಭವಕ್ಕೆ ಬಂದಂಥವು. ಇನ್ನೂ ಹಲವು ಇಬ್ಬರ ಭಾವವನ್ನು ಮಾತ್ರ ತಾಕಿದಂಥವು.

ಊರವರು, ಸಂಬಂಧಿಗಳು ಎಲ್ಲರೂ ಮೇಕಿಯ ಮೇಲೆ ಮನೆಗೆ ಬಂದು ಹೋದರು. ಬಿಳಿಯ ಗಂಡಸನ್ನು ಮದುವೆಯಾದ ಜ್ಯೋತ್ಸ್ನಾಳ ಅದೃಷ್ಟವನ್ನು ನೋಡಬೇಕಿತ್ತಲ್ಲ! ಹೊತ್ತಿಗೊಂದು ಕಥೆಕಟ್ಟಿದರು. ಕೆಲವು ಸಂಭಾಷಣೆಗಳ ಹರಿವನ್ನು ನೋಡಿಯೇ ನೀಲ್ ಏನಾಗಿರಬಹುದೆಂದು ಊಹಿಸುತ್ತಿದ್ದ. 'ಯುವರ್ ಹೋಮ್‌ಲ್ಯಾಂಡ್ ಇಸ್ ನಾಟ್ ಲೈಕ್ ವಾಟ್ ಐ ಥಾಟ್ ಜೋಹ್. ನೌ, ಐ ನೋ ವ್ಹೇರ್ ಯುವರ್ ಇಂಟರ್‌ಪ್ರಿಟೇಶನ್ಸ್ ಕಮ್ ಫ್ರಂ' ಎಂದು ಎಳೆಗರುವಿನಂತೆ ಮುಖ ಮಾಡಿದಾಗ ಅವಳು ಇನ್ನಷ್ಟು ಮೋಹಕ್ಕೆ ಬಿದ್ದಳು.

ನೀಲ್, ಜ್ಯೋತ್ಸ್ನಾ ಇಂಗ್ಲೆಂಡಿಗೆ ತಿರುಗಿ ಹೊರಡಲು ಇನ್ನೆರಡೇ ದಿನಗಳು ಉಳಿದಿದ್ದವು. ರಾತ್ರಿ ಊಟದ ನಂತರ ನೀಲ್ ಬೇಗ ಮಲಗಿಬಿಟ್ಟಿದ್ದ. ಜ್ಯೋತ್ಸ್ನಾ ಮನೆ ಹೊರಗಿನ ಹೇಡಿಗೆಯ ಮೇಲೆ ಕೂತು ಅರಳೀಕಟ್ಟೆಯ ಮೂಲೆಯಿಂದ ಬರುತ್ತಿದ್ದ 'ರುಮ್ಮು ರುಮ್ಮು' ಎಂಬ ತಮಟೆಯ ಶಬ್ದಕ್ಕೆ ಕಿವಿಯಾಗಿದ್ದಳು. ಆ ದಿನ ಟಾರುರಸ್ತೆಯ ಕೂಡುದಾರಿ ಗುಡಿಯ ದುರ್ಗಮ್ಮನಿಗೆ ಹುಣ್ಣಿಮೆ ಪಲ್ಲಕ್ಕಿ ಉತ್ಸವ. ಊರಮೇಲೆ ಮೆರವಣಿಗೆ ಹೊರಟ ದುರ್ಗಮ್ಮನ ಹಿಂದೆ ಅರ್ಧ ಊರೇ ಜೈಕಾರ ಹಾಕುತ್ತ ನಡೆದಿದ್ದನ್ನು ಜ್ಯೋತ್ಸ್ನಾ ನೀಲ್ ಸಂಜೆಯ ಹೊತ್ತಲ್ಲಿ ಮನೆಯ ಅಂಗಳದ ತುದಿಗೆ ನಿಂತು ನೋಡಿದ್ದರು. ಮೆರವಣಿಗೆಯೆಲ್ಲ ಮುಗಿದು ಈ ರಾತ್ರಿಯ ಸಮಯದಲ್ಲಿ ಇನ್ನೇನು ದುರ್ಗಮ್ಮ ಅರಳೀಕಟ್ಟೆಯ ಗದ್ದುಗೆಯೇರಿ ಕೂತ ಮೇಲೆ ನೈವೇದ್ಯವಾಗಬೇಕು, ಪೂಜೆಯಾಗಬೇಕು. ಅದರದೇ ತಯಾರಿಯಲ್ಲಿ ರುಮ್ಮು ರುಮ್ಮು ರುಮ್ಮು ಎಂದು ನಿಧಾನಗತಿಯ ತಮಟೆಯ ಶಬ್ದ.

ಅರಳೀಕಟ್ಟೆಯಲ್ಲಿ ಒಮ್ಮೆಲೇ ತಮಟೆಯ ಸದ್ದು ನಿಂತು ಗಲಾಟೆ, ಜಗಳ ಶುರುವಾದಂತಾಯಿತು. ಜಗುಲಿಯಲ್ಲಿ ಧಾರಾವಾಹಿ ನೋಡುತ್ತ ಕೂತ ಜ್ಯೋತ್ಸ್ನಾಳ ಅಪ್ಪ ಅಮ್ಮ ಹೇಡಿಗೆಗೆ ಬಂದರು. ಮೊಬೈಲು ತೀಡುತ್ತ ಕುಳಿತ ಅವಳ ತಮ್ಮ ಮನು 'ಗದ್ದೆಮೂಲೆಯ ರಮೂನ ನಂಬ್ರವೇ ಹೊಗರಿರಬೇಕು' ಅಂದ.

ಊರಿನೆಲ್ಲರ ಗದ್ದೆ ಮುಗಿದ ಮೇಲೆ, ಮಾಲ್ಕಿ ಬೇಣ ಶುರುವಾಗುವ ಮೊದಲು ಮೂಲೆಯ ಜಾಗದಲ್ಲಿ ಇತ್ತೀಚೆಗೆ ಬಿಡಾರದಂಥ ಮನೆ ಕಟ್ಟಿಕೊಂಡಿರುವ ಶಾಂತಲಾ ಹಾಗೂ ಅವಳ ಮಗ ರಮೂ. ಐವತ್ತು ವರ್ಷಕ್ಕೇ ಮುದುಕಿಯಾದಂತಿದ್ದ ಶಾಂತಲಾ, ಹುಟ್ಟಿದಾರಾಭ್ಯವೂ ಊರಿನ ಅವರಿವರ ಜಮೀನಿನಲ್ಲಿ ಕೂಲಿ ಮಾಡಿದ್ದೆ ನಿಜವೇನೋ ಎಂಬಂತೆ ಊರವರಿಗೆಲ್ಲ ಸದಾ ಬೇಕಾಗಿ ಇದ್ದವಳು. ಅವಳ ಮಗ ರಮೂ, ಅಲ್ಲೆಲ್ಲೋ ತೀರ್ಥಳ್ಳಿ ಕಡೆಯ ಹುಡುಗಿಯನ್ನ ಮದುವೆಯಾಗಿ ಬಂದದ್ದೇ ನೆಪವಾಗಿ ಮದುಮಕ್ಕಳು ಊರಿಗೆ ಬಂದಾಗಿನಿಂದ ಕೆಲವು ಮನೆಯವರು ಒಟ್ಟಾಗಿ ಶಾಂತಲಾಳ ಮನೆಯವರಿಗೆ ತೊಂದರೆ ಕೊಡುತ್ತಿದ್ದ ವಿಷಯ ಊರಲ್ಲಿ ಸ್ವಲ್ಪ ಹಳೆಯದು.

ಸಂಜೆ ಹಾಲಿನ ಡೈರಿಗೆ ಹೋದಾಗ ಅವನಿಗೆ ಸಿಕ್ಕ ಸುದ್ದಿಗೆ ಬೇಗಡೆ ಕಾಗದ ಸುತ್ತಿ ಯಾರೂ ಕೇಳದೆಯೂ ಸಂಜೆ ಏನಾಯಿತು ಎಂದು ಜ್ಯೋತ್ಸ್ನಾಳ ತಮ್ಮ ಮನು ಹೇಳತೊಡಗಿದ. 'ಮೆರವಣಿಗೆಗೆಂದು ಊರ ಮೇಲೆ ಬಂದ ದುರ್ಗಮ್ಮನ ಪಲ್ಲಕ್ಕಿ ರಮೂನ ಮನೆಯನ್ನ ನುಗ್ಗಿದೆ. ಪಲ್ಲಕ್ಕಿ ಹೊತ್ತ ಇಬ್ಬರು ಗಂಡಸರು ಪಲ್ಲಕ್ಕಿಯೊಂದಿಗೇ ರಮೂನ ಹೆಂಡತಿಯ ಮೈಮೇಲೆ ಏರಿ ಹೋಗಿದ್ದಾರೆ. ಆ ಹೆಂಗಸು ಕೈಗೆ ಸಿಕ್ಕ ಪಾತ್ರೆಯನ್ನೇ ಎರಿ ಬಂದ ಗಂಡಸರ ಮೇಲೆ ಚಚ್ಚಿದ್ದಾಳೆ. ಎಲ್ಲರೆದುರು ಹೊಡೆತ ತಿಂದ ಆ ಗಂಡಸರು, ರಮೂನ ಹೆಂಡತಿಯನ್ನು ಬಲವಾಗಿ ಮೂಲೆಗೆ ತಳ್ಳಿ ಪಲ್ಲಕ್ಕಿಯೊಂದಿಗೆ ಮುಂದಿನ ಮನೆಗೆ ಹೋಗಿದ್ದಾರೆ. ರಮೂನ ಹೆಂಡತಿ ತಕ್ಷಣವೇ ಗಂಡನ ಬೈಕಿನಲ್ಲಿ ಶಿರಸಿಯ ಠಾಣೆಗೆ ಹೋಗಿ ಕಂಪ್ಲೇಂಟ್